ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ:ಎಡಿಎಂ2(4)ಸುತ್ತೋಲೆ- 58/18-19 ದಿನಾಂಕ : 31/10/2018

**ಸುತ್ತೋಲೆ**

ವಿಷಯ : **"ಮೋಮೊ"** ಎಂಬ ಅಂತರ್ಜಾಲ ಕ್ರೀಡೆಯಿಂದ ಪ್ರಭಾವಿತರಾಗಿ ವಿದ್ಯಾರ್ಥಿಗಳು ಪ್ರಾಣಾಪಾಯಕ್ಕೆ ಒಳಗಾಗುತ್ತಿರುವ ಬಗ್ಗೆ.

ಉಲ್ಲೇಖ: ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಇವರ ಪತ್ರ ದಿನಾಂಕ: 28/08/2018.

&&&&

**"ಮೋಮೊ"** ಎಂಬ ಅಂತರ್ಜಾಲ ಆಟವನ್ನು ಆಡುವ ಮೂಲಕ ಹದಿಹರೆಯದ ಮಕ್ಕಳು ಪ್ರಾಣಾಪಾಯಕ್ಕೆ ಒಳಗಾಗುತ್ತಿರುವುದು ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಈ ಅಟದಲ್ಲಿ ಮಕ್ಕಳು ಅಪರಿಚಿತ ಮೊಬೈಲ್ ಸಂಖ್ಯೆಗಳ ಜೊತೆ ಸಂವಹನದಲ್ಲಿ ತೊಡಗಿರುತ್ತಾರೆ ಹಾಗೂ ನಿರಂತರ ಪ್ರಚೋದನೆಗಳ ಸಂದೇಶಗಳನ್ನು ಪಡೆಯುತ್ತಾ ಹೋಗುವ ಮೂಲಕ ಪ್ರಾಣಾಪಾಯವೂ ಸೇರಿದಂತೆ ಅಪಾಯಕಾರಿ ಟಾಸ್ಕಗಳಿಗೆ ಒಳಗಾಗುತ್ತಾರೆ. ಶಾಲಾ ವಿದ್ಯಾರ್ಥಿಗಳು ಈ ಅಪಾಯಕಾರಿ ಕ್ರೀಡೆಗೆ ಒಳಗಾಗದಂತೆ ತಡೆಯುವ ನಿಟ್ಟಿನಲ್ಲಿ ಸಮಾಜದ ವಿವಿಧ ಸ್ಥರಗಳಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದ್ದು, ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ಅಪ್ರಾಪ್ತ ವಯಸ್ಸಿನ ಮಕ್ಕಳು ಇಂತಹ ಪ್ರಚೋದನಕಾರಿ ಅಂತರ್ಜಾಲ ಕ್ರೀಡೆಯ ಗೀಳಿಗೆ ಬೀಳದಂತೆ ಎಚ್ಚರಿಸುವುದು ಇಲಾಖೆಯ, ಪೋಷಕರ, ಸಂಘಸಂಸ್ಥೆಗಳ ಮತ್ತು ಶಾಲಾ ಆಡಳಿತ ಮಂಡಳಿಗಳ ಆದ್ಯ ಕರ್ತವ್ಯವಾಗಿರುತ್ತದೆ.

ಮಕ್ಕಳು ಅಂತರ್ಜಾಲ ತಾಣಗಳಲ್ಲಿ ಈ ರೀತಿಯ ಅನಾರೋಗ್ಯಕರ ಅಟಗಳಿಂದ ದೂರವಿರುವಂತೆ ಮತ್ತು ವೆಬ್ಸೈಟ್‌ಗಳನ್ನು ಬಳಕೆ ಮಾಡದಂತೆ ಮಕ್ಕಳಿಗೆ ತಿಳುವಳಿಕೆ ನೀಡುವುದು ಹಾಗೂ ಪ್ರತಿ ದಿನ ಶಾಲೆಗಳಲ್ಲಿ ಮಕ್ಕಳಿಗೆ ಅರಿವು ಮೂಡಿಸುವುದು ಹಾಗೂ ಬ್ರೌಸಿಂಗ್ ಸೆಂಟರ್‌ಗಳಲ್ಲಿ ಮಕ್ಕಳಿಗೆ **"ಮೋಮೊ"** ಆಟ ಆಡಲು ಅವಕಾಶ ಕಲ್ಪಿಸದಂತೆ ಪೋಲೀಸ್ ಠಾಣೆಯ ಮೂಲಕ ಕ್ಷೇತ್ರಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮವಹಿಸುವುದು.

ಈ ರೀತಿ ಅನಾರೋಗ್ಯಕರ ಅಂತರ್ಜಾಲ ತಾಣಗಳನ್ನು ನಿರ್ಬಂಧಿಸುವಲ್ಲಿ ಜಿಲ್ಲಾಡಳಿತದ ಸಹಕಾರ ಪಡೆದು ಉಪನಿರ್ದೇಶಕರು, ಕ್ಷೇತ್ರಶಿಕ್ಷಣಾಧಿಕಾರಿಗಳು, ಮುಖ್ಯೋಪಾಧ್ಯಾಯರುಗಳು ಹಾಗೂ ಶಿಕ್ಷಕರು **"ಮೋಮೊ"** ಎಂಬ ಅನಾರೋಗ್ಯಕರ ಅಂತರ್ಜಾಲ ಆಟದಲ್ಲಿ ವಿದ್ಯಾರ್ಥಿಗಳು ಸಿಲುಕಿಕೊಳ್ಳದಂತೆ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲು ಕಟ್ಟು ನಿಟ್ಟಿನ ಸೂಚನೆ ನೀಡಿದೆ.

**(ಮಾನ್ಯ ನಿರ್ದೇಶಕರು ಕರಡು ಅನುಮೋದಿಸಿರುತ್ತಾರೆ)**

ಉಪನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಇವರಿಗೆ:

1) ರಾಜ್ಯದ ಎಲ್ಲಾ ಉಪನಿರ್ದೇಶರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಾ.ಶಿ.ಇ [ಉಪನಿರ್ದೇಶಕರು [ಆಡಳಿತ] ಸಾ.ಶಿ.ಇ ಇವರ ಮೂಲಕ] ಸೂಕ್ತ ಕ್ರಮಕ್ಕಾಗಿ.